ಪ್ರಜಾವಾಣಿ

# 25ರಿಂದ ಜೈನ್ ವಿ.ವಿ. ಕ್ರೀಡಾಕೂಟ

ಬೆಂಗಳೂರು: ಜೈನ್ ವಿಶ್ವವಿದ್ಯಾಲಯ ಆಶ್ರಯದ 19ನೇ ಅಖಿಲ ಭಾರತ ಅಂತರ ವಾರ್ಸಿಟಿ ಕ್ರೀಡಾಕೂಟ ಜನವರಿ 25ರಿಂದ 28ರವರೆಗೆ ನಡೆಯಲಿದೆ.

ಕೂಟದಲ್ಲಿ ಭಾರತದ 50 ಕಾಲೇಜುಗಳ 1,200 ಮತ್ತು ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ಪುರುಷರಿಗಾಗಿ ಕ್ರಿಕೆಟ್, ವಾಲಿಬಾಲ್ ಮತ್ತು ಫುಟ್‌ಬಾಲ್ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ. ಬ್ಯಾಸ್ಕೆಟ್‌ಬಾಲ್, ಟೇಬಲ್ ಟೆನಿಸ್, ಬ್ಯಾಡ್ಮಿಂಟನ್, ಟೆನಿಸ್, ಈಜು ಮತ್ತು ಕರಾಟೆ ಸ್ಪರ್ಧೆಗಳಲ್ಲಿ ಪುರುಷರು ಮತ್ತು ಮಹಿಳೆಯರು ಸೆಣಸಲಿದ್ದಾರೆ. ಹೆಚ್ಚಿನ ಮಾಹಿತಿಗೆ ರಾಹುಲ್ (ಮೊ: 9844 557752) ಅವರನ್ನು ಸಂಪರ್ಕಿಸಿ.